ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೨

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತನೆಯ ಅಧಿವೇಶನ

## ಬುಧವಾರ, ದಿನಾಂಕ: ೦೨ನೇ ಮಾರ್ಚ್, ೨೦೧೬

---

### ಸಮೂಹ – III

೧. ಅರಣ್ಯ ಸಚಿವರು
೨. ಕಂದಾಯ ಸಚಿವರು
೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು
೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು
೫. ಸಣ್ಣ ನೀರಾವರಿ ಸಚಿವರು
೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು
೭. ಕಾರ್ಮಿಕ ರಾಜ್ಯ ಸಚಿವರು

---

### ಚಾಮರಾಜನಗರ ಜಿಲ್ಲೆಯಲ್ಲಿ ಆನೆಗಳ ಹಾವಳಿ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೬ (೧೭೨) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಒಂದು ವರ್ಷದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಆನೆಗಳು ರೈತರ ಜಮೀನಿನ ಮೇಲೆ ಎಷ್ಟು ಕಡೆ ದಾಳಿ ಮಾಡಿರುತ್ತವೆ ; ಇದರಿಂದ ಆಗಿರುವ ಬೆಳೆ ಹಾನಿ ಎಷ್ಟು ; (ಪ್ರಕರಣವಾರು ವಿವರ ಒದಗಿಸುವುದು)

(ಆ) ಬೆಳೆ ಹಾನಿಗೆ ಸಂಬಂಧಿಸಿದಂತೆ ರೈತರಿಗೆ ಪರಿಹಾರ ನೀಡಲಾಗಿದೆಯೇ ; ಬಾಕಿ ಇರುವ ಪ್ರಕರಣಗಳು ಹಾಗೂ ನೀಡಬೇಕಾದ ಮೊತ್ತ ಎಷ್ಟು ? (ತಾಲ್ಲೂಕುವಾರು ವಿವರ ಒದಗಿಸುವುದು)

## ಸಾಮಾಜಿಕ ಅರಣ್ಯ ಕಾರ್ಯಕ್ರಮದಡಿಯಲ್ಲಿ ನಿಗದಿಪಡಿಸಿರುವ ಅನುದಾನ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೧೭ (೧೮೫) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೋಲಾರ ಜಿಲ್ಲೆಗೆ ಅರಣ್ಯ ಇಲಾಖೆ ವತಿಯಿಂದ ಸಾಮಾಜಿಕ ಅರಣ್ಯ ಕಾರ್ಯಕ್ರಮಗಳಿಗಾಗಿ ಸರ್ಕಾರ ೨೦೧೫–೧೬ನೇ ಸಾಲಿನಲ್ಲಿ ನಿಗಧಿಪಡಿಸಿರುವ ಹಣ ಎಷ್ಟು ;

(ಆ) ಹಾಗಿದ್ದಲ್ಲಿ, ಈ ಸಾಲಿನಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ ; ಬಾಕಿ ಉಳಿದಿರುವ ಹಣ ಎಷ್ಟು ;

(ಇ) ಇದುವರೆವಿಗೂ ಎಷ್ಟು ಸಸಿಗಳನ್ನು ನೆಡಲಾಗಿದೆ ; ಯಾವ ಯಾವ ಕಡೆ ಸಸಿಗಳನ್ನು ನೆಡಿಸಲಾಗಿದೆ ;

(ಈ) ಹಾಗಿದ್ದಲ್ಲಿ, ನಿಗಧಿಪಡಿಸಿರುವ ನಿರ್ವಹಣಾ ವೆಚ್ಚ ಎಷ್ಟು ?

## ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡುವ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೮ (೪) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಮೂರು ವರ್ಷಗಳಿಂದ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ಗುರುತಿಸಲಾಗಿರುವ ಬಾಲ ಕಾರ್ಮಿಕರ ಸಂಖ್ಯೆ ಎಷ್ಟು ;

(ಇ) ಬಾಲ ಕಾರ್ಮಿಕರನ್ನು ಹೊಂದಿರುವ ಮಾಲೀಕರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ವಿಧಿಸಲಾಗಿರುವ ಶಿಕ್ಷೆಯ ಪ್ರಮಾಣವೇನು? (ಮಾಹಿತಿ ನೀಡುವುದು)

## ಭೂಕಂದಾಯ ಕಾಯ್ದೆ ೯೪(ಸಿ) ಹಾಗೂ ೯೪(ಸಿ)(ಸಿ) ಅರ್ಜಿ ಸಲ್ಲಿಸಲು ಅವಧಿ ವಿಸ್ತರಿಸುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೯ (೫೬) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಭೂಕಂದಾಯ ಕಾಯ್ದೆ ೯೪(ಸಿ) ಹಾಗೂ ೯೪(ಸಿ)(ಸಿ) ತಿದ್ದುಪಡಿಯಂತೆ ಕೊಡಗು ಜಿಲ್ಲೆಯಲ್ಲಿ ಹಕ್ಕು ಪತ್ರ ಕೋರಿ ಎಷ್ಟು ಅರ್ಜಿಗಳು ಸಲ್ಲಿಕೆಯಾಗಿವೆ; (ತಾಲ್ಲೂಕುವಾರು, ಪಂಚಾಯ್ತಿವಾರು ವಿವರ ನೀಡುವುದು)

(ಆ) ಹಕ್ಕುಪತ್ರ ಕೋರಿ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಅವಧಿ ಯಾವುದು; ಅವಧಿಯನ್ನು ವಿಸ್ತರಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

(ಇ) ಈವರೆಗೆ ಎಷ್ಟು ಜನರಿಗೆ ಹಕ್ಕುಪತ್ರ ನೀಡಲಾಗಿದೆ ; (ವಿವರಗಳನ್ನು ಒದಗಿಸುವುದು)

(ಈ) ಒಂದು ವೇಳೆ ಹಕ್ಕು ಪತ್ರ ನೀಡದೆ ಇದ್ದಲ್ಲಿ ಕಾರಣವೇನು ; ಯಾವಾಗ ಹಕ್ಕು ಪತ್ರ ನೀಡಲಾಗುವುದು ? (ವಿವರಗಳನ್ನು ಒದಗಿಸುವುದು)

## ಚಿಕ್ಕಮಗಳೂರು ಜಿಲ್ಲೆಯ ಕಂದಾಯ ಇಲಾಖೆಯ ಅರ್ಜಿಗಳ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು)** –

೨೦ (೫೧) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಚಿಕ್ಕಮಗಳೂರು ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಅರ್ಜಿ ಸ್ವೀಕರಿಸಿ ಹಲವಾರು ತಿಂಗಳಾದರೂ ವಿಲೇವಾರಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ;

(ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಕಾಲ ಸೇವೆಗಳ ಅಡಿಯಲ್ಲಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ಇಲಾಖಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಈ ಅರ್ಜಿಗಳಲ್ಲಿ ವಿಲೇವಾರಿ ಆಗಿರುವ ಅರ್ಜಿಗಳ ಸಂಖ್ಯೆ ಎಷ್ಟು ; ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು ?

## ಎಸ್.ಸಿ.ಎಲ್.ಪಿ. ಯೋಜನೆ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ)** –

೨೧ (೧೬೧) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ರಾಜ್ಯ ಸರ್ಕಾರದಿಂದ S.C.L.P. (ಸ್ಟೇಟ್ ಚೈಲ್ಡ್ ಲೇಬರ್ ಪ್ರಾಜೆಕ್ಟ್) ಯೋಜನೆಯನ್ನು ನಡೆಸುತ್ತಿರುವ ಸಂಸ್ಥೆಗಳಿಗೆ ಅನುದಾನವನ್ನು ಸಮರ್ಪಕವಾಗಿ ನೀಡಲಾಗುತ್ತಿದೆಯೇ ;

(ಆ) ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಸದರಿ ಯೋಜನೆಗಳನ್ನು ನಡೆಸುತ್ತಿರುವ ಕೆಲವು ಸಂಸ್ಥೆಗಳಿಗೆ ಜುಲೈ ೨೦೧೪ ರಿಂದ ಹಾಗೂ ಕೆಲವು ಸಂಸ್ಥೆಗಳಿಗೆ ಸೆಪ್ಟೆಂಬರ್ ೨೦೧೪ ರಿಂದ ನೀಡಬೇಕಾಗಿದ್ದ ಅನುದಾನವು ಬಾಕಿ ಇರುವುದು ನಿಜವೇ ; (ವಿವರ ನೀಡುವುದು)

(ಇ) ನಿಜವಾಗಿದ್ದಲ್ಲಿ, ಜರೂರಾಗಿ ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ ; ಇದಕ್ಕೆ ಬೇಕಾಗುವ ಕಾಲಾವಧಿ ಎಷ್ಟು ?

## ರೈತರಿಗೆ ನೀಡಿರುವ ಸಹಾಯದ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು)** –

೨೨ (೨೫೭) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಈ ವರ್ಷ ಬರಗಾಲ ಎಂದು ಘೋಷಿಸಲಾದ ತಾಲ್ಲೂಕುಗಳು ಎಷ್ಟು ಮತ್ತು ಯಾವುವು ;

(ಆ) ಬರಗಾಲದಿಂದ ತೊಂದರೆಗೊಳಗಾದ ರೈತರಿಗೆ ನೆರವು ನೀಡಲು ಹಮ್ಮಿಕೊಂಡಿರುವ ಯೋಜನೆಗಳಾವುವು ;

(ಇ) ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ ವರದಿಗಳೇನು ; ಬಂದಿರುವ ಪರಿಹಾರವೆಷ್ಟು;

(ಈ) ರಾಜ್ಯ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಉ) ಹೊಸ ತಾಲ್ಲೂಕುಗಳನ್ನು ಬರಗಾಲದ ಪಟ್ಟಿಗೆ ಸೇರಿಸಲಾಗಿದೆಯೇ ?

## ಎನಿವೇರ್ ರಿಜಿಸ್ಟ್ರೇಷನ್ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು)** –

೨೩ (೨೪೮) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಂದಾಯ ಇಲಾಖೆಯಲ್ಲಿ ಜಾರಿಗೆ ತಂದಿರುವ "ಎನಿವೇರ್ ರಿಜಿಸ್ಟ್ರೇಷನ್"ನ್ನು ಜಾರಿಗೆ ತರುವ ಮುನ್ನ ಕಾನೂನು ಇಲಾಖೆ ಒಪ್ಪಿರುವುದೇ ;

(ಆ) "ಎನಿವೇರ್ ರಿಜಿಸ್ಟ್ರೇಷನ್"ನಿಂದ ಅಕ್ರಮ ನೋಂದಣಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು ?

## ಹೈದ್ರಾಬಾದ್–ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಭೀಕರ ಬರಗಾಲದ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೨೪ (೧೭೮) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹೈದ್ರಾಬಾದ್–ಕರ್ನಾಟಕದ ಆರು ಜಿಲ್ಲೆಗಳು ಭೀಕರ ಬರಗಾಲದಿಂದ ತತ್ತರಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕಿದೆಯೇ, ಇದ್ದರೆ ; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಆ) ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ; (ತಾಲ್ಲೂಕುವಾರು ಅನುದಾನವಾರು ವಿವರ ನೀಡುವುದು)

(ಇ) ಸದರಿ ಹೈದ್ರಾಬಾದ್–ಕರ್ನಾಟಕ ಜಿಲ್ಲೆಗಳಲ್ಲಿ ಇನ್ನೂ ಎಷ್ಟು ಗ್ರಾಮಗಳಿಗೆ ಕುಡಿಯುವ ನೀರಿನ ಸೌಕರ್ಯ ಹಾಗೂ ಗೋಶಾಲೆಗಳನ್ನು ಕಲ್ಪಿಸಲಾಗಿದೆ ಇನ್ನೂ ಎಷ್ಟು ಗ್ರಾಮಗಳಿಗೆ ಬಾಕಿ ಇದೆ ? (ತಾಲ್ಲೂಕುವಾರು ವಿವರ ನೀಡುವುದು)

## ಸಣ್ಣ ಹಳ್ಳಿಗಳು – ಕಂದಾಯ ಗ್ರಾಮ

**ಡಾ. ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೨೫ (೨೫೮) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಗೊಲ್ಲರಹಟ್ಟಿ, ತಾಂಡಾ ಮತ್ತು ಮಜಿರೆಗಳಂತ ಸಣ್ಣ ಹಳ್ಳಿಗಳನ್ನು ಅವುಗಳ ಸಾಮಾಜಿಕ/ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ನೀಡುವ ಸಲುವಾಗಿ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸರ್ಕಾರ ಆದೇಶಗಳನ್ನು ಹೊರಡಿಸಿದೆಯೇ; ಹೊರಡಿಸಿದ್ದರೆ ಯಾವಾಗ ; (ಪ್ರತಿಗಳನ್ನು ಒದಗಿಸುವುದು)

(ಆ) ಈ ಆದೇಶದ ತರುವಾಯ ಎಷ್ಟು ಕಂದಾಯ ಗ್ರಾಮಗಳನ್ನು ಘೋಷಣೆ ಮಾಡಲಾಗಿದೆ ; (ವಿವರಗಳನ್ನು ನೀಡುವುದು)

(ಇ) ಅನೇಕ ಗೊಲ್ಲರಹಟ್ಟಿ, ತಾಂಡಾ ಮತ್ತು ಮಜಿರೆಗಳಲ್ಲಿ ಕನಿಷ್ಟ ನಾಗರಿಕ ಸೌಲಭ್ಯಗಳಿಲ್ಲದೆ, ನಾಗರಿಕತೆಯ ಕೊರತೆಯ ಕಾರಣಗಳಿಂದ ಸಾಮಾಜಿಕ ಅನಿಷ್ಟ ಪದ್ದತಿಗಳ ವಿಷವರ್ತುಲದಲ್ಲಿ ಮಹಿಳೆಯರು ಬದುಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಗ್ರಾಮಗಳಲ್ಲಿನ ನಾಗರಿಕರ ಜೀವನಮಟ್ಟ ಯಾವಾಗ ಸುಧಾರಣೆಯಾಗಲಿದೆ, ಇದಕ್ಕೆ ಸರ್ಕಾರದ ಯೋಜನೆಗಳೇನು ?

## ರೈತರಿಗೆ ನೀಡಲು ಬಾಕಿ ಇರುವ ಬರ ಪರಿಹಾರದ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೬ (೪೬) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ರೈತರಿಗೆ ವಿತರಿಸಲು ಬಾಕಿ ಇರುವ ಬರ ಪರಿಹಾರದ ಮೊತ್ತವೆಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ವಿವರ ಒದಗಿಸುವುದು)

(ಆ) ಕಳೆದ ೪ ವರ್ಷಗಳಲ್ಲಿ ರೈತರಿಗೆ ವಿತರಿಸಿರುವ ಬರ ಪರಿಹಾರದ ಮೊತ್ತವೆಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ವಿವರ ಒದಗಿಸುವುದು)

(ಇ) ಪ್ರಸಕ್ತ ಸಾಲಿನಲ್ಲಿ ರೈತರಿಗೆ ಬರ ಪರಿಹಾರದ ರಾಜ್ಯದ ಪಾಲನ್ನು ಪಾವತಿಸಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ;

(ಈ) ರೈತರ ಖಾತೆಗಳಿಗೆ ಶೀಘ್ರವಾಗಿ ಬರ ಪರಿಹಾರದ ಮೊತ್ತ ಜಮೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ? (ವಿವರ ಒದಗಿಸುವುದು)

## ನಿರ್ವಹಣಾ ಮತ್ತು ದುರಸ್ತಿ ವೆಚ್ಚಕ್ಕಾಗಿ ಬಿಡುಗಡೆಯಾದ ಅನುದಾನದ ಬಳಕೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)–**

೨೭ (೨೩೫) ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೨–೧೩ ರಿಂದ ೨೦೧೫–೧೬ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಸಣ್ಣ ನೀರಾವರಿ ಇಲಾಖೆಯಲ್ಲಿ ವಿವಿಧ ಯೋಜನೇತರ ಹಾಗೂ ಇನ್ನಿತರ ಲೆಕ್ಕ ಶೀರ್ಷಿಕೆಯಲ್ಲಿ ನಿರ್ವಹಣಾ ಮತ್ತು ದುರಸ್ತಿ ವೆಚ್ಚಕ್ಕಾಗಿ ಬಿಡುಗಡೆಯಾದ ಒಟ್ಟು ಅನುದಾನ ಎಷ್ಟು ;

(ಆ) ಸದರಿ ಅನುದಾನದಲ್ಲಿ ಬಳಕೆ ಮಾಡಲಾದ ಹಾಗೂ ಬಾಕಿ ಉಳಿದ ಅನುದಾನ ಎಷ್ಟು ; (ಮಾಹಿತಿ ನೀಡುವುದು)

(ಇ) ಹಾಗಿದ್ದಲ್ಲಿ, ಸದರಿ ಬಳಕೆ ಮಾಡಿದ ವಿವಿಧ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು ; (ಸಂಪೂರ್ಣ ಪ್ರಗತಿ ವರದಿಯನ್ನು ಒದಗಿಸುವುದು)

(ಈ) ಬಳಕೆ ಮಾಡದೇ ಅನುದಾನ ಬಾಕಿ ಉಳಿಯಲು ಕಾರಣಗಳೇನು ; ಬಾಕಿ ಉಳಿಯಲು ಕಾರಣಕರ್ತರಾದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ; (ವಿವರ ನೀಡುವುದು)

(ಊ) ೨೦೧೫-೧೬ನೇ ಸಾಲಿನ ವಿವಿಧ ಕ್ರಿಯಾಯೋಜನೆಯಲ್ಲಿ ಮಂಜೂರಾದ ಯೋಜನೇತರ ವೆಚ್ಚವೆಷ್ಟು ? (ತಾಲ್ಲೂಕುವಾರು ಯೋಜನಾವಾರು ಮಾಹಿತಿಯನ್ನು ನೀಡುವುದು)

## ಸರ್ಕಾರಿ/ಸಂಸ್ಥೆಯ ಕಾರ್ಮಿಕರ ಸಮಸ್ಯೆಗಳು

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

೨೮ (೧೮೨) ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರ/ಸಂಸ್ಥೆ/ಮಾಲೀಕರು ನೀಡುವ ಕನಿಷ್ಠ ವೇತನ ಭತ್ಯೆಗಳನ್ನು ಯಥಾವತ್ತಾಗಿ ಕಾರ್ಮಿಕರುಗಳಿಗೆ ನೀಡದೆ ವಂಚಿಸುತ್ತಿರುವ ಕಾರ್ಮಿಕ ಗುತ್ತಿಗೆದಾರರ ವಿರುದ್ಧ ಎಷ್ಟು ಪ್ರಕರಣಗಳು ಕಳೆದ ೨ ವರ್ಷಗಳಲ್ಲಿ ವರದಿಯಾಗಿವೆ; (ಗುತ್ತಿಗೆದಾರರ ವಿವರಗಳನ್ನು ನೀಡುವುದು)

(ಆ) ಬೆಂಗಳೂರು ಮಹಾನಗರದಲ್ಲಿ, ರಸ್ತೆ ಮತ್ತು ನಾಗರಿಕ ಬಡಾವಣೆಗಳನ್ನು ಸ್ವಚ್ಛತೆಗೊಳಿಸುತ್ತಿರುವ ಮಹಿಳಾ ಕಾರ್ಮಿಕರುಗಳಿಗೆ ಗ್ಲೌಸ್, ಮಾಸ್ಕ್, ಇತ್ಯಾದಿ ಭದ್ರತೆಯ ಉಪಕರಣಗಳನ್ನು ಒದಗಿಸದೆ ಕಾರ್ಮಿಕರಿಗೆ ಗುತ್ತಿಗೆದಾರರು ವಂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಮೇಲಿನ ಪ್ರಕರಣಗಳಲ್ಲಿ ಕೈಗೊಂಡಿರುವ ಕ್ರಮಗಳೇನು ?

## ಎತ್ತಿನಹೊಳೆ ಯೋಜನೆಯ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೨೯ (೨೫೬) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬರಪೀಡಿತ ಪ್ರದೇಶಗಳಾದ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಎತ್ತಿನಹೊಳೆ ಯೋಜನೆಯನ್ನು ಯಾವಾಗ ಜಾರಿಗೆ ತರಲಾಯಿತು ಮತ್ತು ಅದರ ಯೋಜನಾ ಗಾತ್ರ ಎಷ್ಟು ;

(ಆ) ಎತ್ತಿನಹೊಳೆ ಯೋಜನೆಯು ಹಾಲಿ ಯಾವ ಹಂತದಲ್ಲಿದೆ ; ಇಲ್ಲಿಯವರೆಗೂ ಎಷ್ಟು ಹಣ ಖರ್ಚು ಮಾಡಲಾಗಿದೆ ; (ವಿವರವಾದ ಮಾಹಿತಿ ನೀಡುವುದು)

(ಇ) ಈ ಯೋಜನೆ ಪೂರ್ಣಗೊಳಿಸಲು ಬೇಕಾಗುವ ಹಣವೆಷ್ಟು ;

(ಈ) ಈ ಯೋಜನೆಯನ್ನು ಸರ್ಕಾರವು ಯಾವ ಕಾಲಮಿತಿಯೊಳಗೆ ಪೂರ್ಣ ಗೊಳಿಸಲಿದೆ ?

## ಜಿಲ್ಲಾ ಹಾಗೂ ತಾಲ್ಲೂಕು ಕ್ರೀಡಾಂಗಣಗಳ ಮಾಹಿತಿ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೩೦ (೨೪೫) ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಎಷ್ಟು ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ ; (ವಿವರವಾದ ಮಾಹಿತಿ ನೀಡುವುದು)

(ಆ) ಜಿಲ್ಲಾ ಮತ್ತು ತಾಲ್ಲೂಕು ಕ್ರೀಡಾಂಗಣಗಳಲ್ಲಿ ಎಷ್ಟು ಕ್ರೀಡಾ ತರಬೇತುದಾರರು ಕಾರ್ಯ ನಿರ್ವಹಿಸುತ್ತಿರುವರು ; (ವಿವರ ನೀಡುವುದು)

(ಇ) ಹೊಸದಾಗಿ ಜಿಲ್ಲಾ ಮತ್ತು ತಾಲ್ಲೂಕು ಕ್ರೀಡಾ ಕೇಂದ್ರಗಳಲ್ಲಿ ಎಷ್ಟು ತರಬೇತುದಾರರನ್ನು ಮತ್ತು ಯಾವ ಯಾವ ಕ್ರೀಡಾ ತರಬೇತುದಾರರನ್ನು ನೇಮಕ ಮಾಡಿಕೊಳ್ಳುವ ಯೋಜನೆ ಹೊಂದಲಾಗಿದೆ ಹಾಗಿದ್ದಲ್ಲಿ, ವಿವರ ನೀಡುವುದು ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾ.ಸೂ. 981, ಪ್ರತಿಗಳು 1500